ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

-19-

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE : 27/1/2021

## ಲಂಚ ಆರೋಪಕ್ಕೆ ಆರ್.ಅಶೋಕ್ ಸ್ಪಷ್ಟನೆ

**ಬೆಂಗಳೂರು:** ಆಪ್ತ ಸಹಾಯಕ ಗಂಗಾಧರ್ ಲಂಚಕ್ಕೆ ಬೇಡಿಕೆಯಿಟ್ಟ ದೂರಿನ ಹಿನ್ನೆಲೆಯಲ್ಲಿ ಕಂದಾಯ ಸಚಿವ ಆರ್.ಅಶೋಕ್ ಮಂಗಳವಾರ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಭೇಟಿಯಾಗಿ ಮಾಹಿತಿ ನೀಡಿದ್ದಾರೆ. ಈ ವೇಳೆ ಪ್ರಕರಣದ ವಸ್ತುಸ್ಥಿತಿ ತಿಳಿದು ಸೂಕ್ತ ಕ್ರಮವಹಿಸುವಂತೆ ಆರ್.ಅಶೋಕ್‌ಗೆ ಸಿಎಂ ಬಿಎಸ್‌ವೈ ಸೂಚಿಸಿದ್ದಾರೆ. ಆರೋಪ ಪ್ರಕರಣ ಕುರಿತು ತನಿಖಾ ವರದಿ, ಸೂಕ್ತ ಸಾಕ್ಷ್ಯಾಧಾರ ಲಭ್ಯವಾದ ಬಳಿಕ ಮುಂದಿನ ಕ್ರಮವಹಿಸಲು ಆರ್.ಅಶೋಕ್ ಚಿಂತನೆ ನಡೆಸಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ. ವಿಧಾನಸಭೆ ಸಚಿವಾಲಯದ ಉದ್ಯೋಗಿಯಾಗಿರುವ ಗಂಗಾಧರ್ ವಿರುದ್ಧ ಆರೋಪ ಕೇಳಿ ಬಂದಿರುವ ಹಿನ್ನೆಲೆಯಲ್ಲಿ ಮಾತೃ ಇಲಾಖೆಗೆ ಕಳುಹಿಸಬೇಕೆಂಬ ಸಲಹೆ ಕೇಳಿಬರುತ್ತಿದ್ದು, ಈ ವಿಷಯದಲ್ಲಿ ಸತ್ಯಾಸತ್ಯತೆ ತಿಳಿದು ಮುಂದಿನ ಹೆಜ್ಜೆಯಿಡಲು ಆರ್.ಅಶೋಕ್ ಯೋಚಿಸಿದ್ದಾರೆ ಎಂದು ಮೂಲಗಳು ಹೇಳಿವೆ.



» ಸಿಎಂಗೆ ಮಾಹಿತಿ ನೀಡಿದ ಸಚಿವ

**ದೂರು ಸಲ್ಲಿಕೆ:** ಗಂಗಾಧರ್ ವಿರುದ್ಧ ಲಂಚದ ಬೇಡಿಕೆಯಿಟ್ಟ ಆರೋಪ ಹೊರಿಸಿ ಶೃಂಗೇರಿ ಉಪನೋಂದಣಾಧಿಕಾರಿ ಎಚ್.ಎಸ್.ಚೆಲುವರಾಜು ಜ.25ರಂದು ದೂರು ಸಲ್ಲಿಸಿದ್ದು, ಮೊಬೈಲ್ ಕರೆಗಳ ಸಂಭಾಷಣೆ ಸಿಡಿ ಹಾಗೂ ವಾಟ್ಸಾಪ್ ಸಂದೇಶದ ಮುದ್ರಿತ ಪ್ರತಿಯನ್ನು ನೀಡಿದ್ದಾರೆ.